

ನಿರ್ದೇಶಕಿ ರೂಪಾ ಅಯ್ಯರ್ ಚಿತ್ರೀಕರಣದಲ್ಲಿ..

ಸಿನಿಮಾದ ಮೂಲಕ ಕನ್ನಡ ಚಿತ್ರರಂಗದ ಗಮನ ಸೆಳೆದಿರುವ ರಿಶಿಕಾ, ಈ ಹಿಂದೆ 'ಶುದ್ಧಿ' ಖ್ಯಾತಿಯ ಆದೇಶ್ ಈಶ್ವರಪ್ಪ ಮತ್ತು 'ಶಟರ್‌ದುಲಾಯಿ' ತುಳು ಚಿತ್ರದ ಶಶಿಕಾಂತ್ ಗಟ್ಟಿ ಅವರ ಜತೆ ಕೆಲಸ ಮಾಡಿದವರು. ವೆಬ್ ಪತ್ರಕರ್ತೆ, ಟೀವಿ ಸೀರಿಯಲ್, ಸಿನಿಮಾ ನಟಿಯಾಗಿ ಅನುಭವ ಪಡೆದ ಬಳಿಕ ಈಗ ನಿರ್ದೇಶನಕ್ಕೆ ಇಳಿದಿದ್ದಾರೆ. ಅತ್ಯಂತ ಕಡಿಮೆ ಬಜೆಟ್‌ನಲ್ಲಿ ಅವರು ತಯಾರಿಸಿದ ಟ್ರಂಕ್ ಚಿತ್ರ ಮೊದಲ ವಾರ ಮುಗಿದ ತಕ್ಷಣವೇ ಮಲ್ಟಿಪ್ಲೆಕ್ಸ್‌ಗಳಿಂದ ಎತ್ತಂಗಡಿಯಾಗುವುದರಲ್ಲಿತ್ತು. 'ಅಂಬರೀಷ್ ಅಂಕಲ್ ಮತ್ತು ಜಯಣ್ಣ ಸರ್ ವಿಷಯ ತಿಳಿದು ಸಹಾಯಕ್ಕೆ ಬಂದರು. ಥಿಯೇಟರ್‌ನವರಿಗೆ ತಿಳಿ ಹೇಳಿ ಹಲವು ಸ್ಕ್ರೀನ್‌ಗಳಲ್ಲಿ ಪ್ರದರ್ಶನ ಮುಂದುವರೆಸಿದರು. ಈಗ 25 ದಿನ ದಾಟಿದೆ. ಹಣ ವಾಪಸ್ ಬಂದಿದೆ. ಬೇರೆ ಭಾಷೆಯ ಡಬ್ಬಿಂಗ್ ಹಕ್ಕುಗಳೂ ಮಾರಾಟವಾಗಿವೆ. ಹೊಸಬರ ಒಂದು ಚಿತ್ರ, ಯಾವುದೇ ಪ್ರಚಾರವಿಲ್ಲದೆ ಬಂದಾಗ ಹೀಗೆ ಒಂದೇ ವಾರದಲ್ಲಿ ಥಿಯೇಟರ್‌ನಿಂದ ತೆಗೆದರೆ ಹೇಗೆ? ನಮ್ಮ ಚಿತ್ರ ನೋಡಿದವರೆಲ್ಲರೂ ಪ್ರಚಾರ ಮಾಡಿದ್ದರಿಂದ ಇಷ್ಟು ದಿನ ನಡೆಯಿತು. ಆನ್‌ಲೈನ್‌ನಲ್ಲಿ ನಾವು ಸಾಕಷ್ಟು ಪ್ರಚಾರ ಮಾಡಿದೆವು. ಆದರೆ ಅಲ್ಲಿಂದ ಬರುವುದು ಶೇಕಡಾ 10ರಷ್ಟು ಪ್ರೇಕ್ಷಕರು ಮಾತ್ರ' ಎಂದವರು ರಿಶಿಕಾ.

ಇಷ್ಟೆಲ್ಲ ಸಮಸ್ಯೆಗಳಿದ್ದರೂ ಕನ್ನಡದ ನಿರ್ದೇಶಕಿಯರು ಉತ್ಸಾಹ ಕಳೆದುಕೊಂಡಿಲ್ಲ ಎನ್ನುವುದು ಆಶಾದಾಯಕ ಬೆಳವಣಿಗೆ. ಸುಮನ್ ಕಿತ್ತೂರು ಅವರ ಹೊಸ ತೆಲುಗು ಸಿನಿಮಾಕ್ಕೆ ಚಿತ್ರಕಥೆ ಸಿದ್ಧವಾಗುತ್ತಿದೆ. ನಕ್ಸಲಿಸಂ ಹಿನ್ನೆಲೆಯ ಕಥೆಯನ್ನು ಮಹಿಳಾ ದೃಷ್ಟಿಕೋನದಿಂದ ರೂಪಿಸಲು ಯತ್ನ ನಡೆಸಿದ್ದಾರೆ. ಅನನ್ಯಾ ಕಾಸರವಳ್ಳಿ ಅವರು ನಿರ್ಮಾಪಕ ಬಸಂತ್ ಕುಮಾರ್ ಅವರ ಇನ್ನೊಂದು ಚಿತ್ರಕ್ಕೆ ಸಿದ್ಧವಾಗುತ್ತಿದ್ದಾರೆ. ವಿಜಯಲಕ್ಷ್ಮೀಯವರ ಹೊಸ ಚಿತ್ರ 'ಯಾನ' ಶೀಘ್ರ ತೆರೆಗೆ ಬರಲಿದೆ. ಕವಿತಾ ಅವರ 'ಸಮ್ಮರ್ ಹಾಲಿಡೇಸ್' ಕನ್ನಡ ಅವತರಣಿಕೆ ಶೀಘ್ರ ತೆರೆಗೆ ಬರಲಿದೆ. 'ಟ್ರಂಕ್" ಮಾಡಿದ ರಿಶಿಕಾ ಶರ್ಮಾ, ಅದೇ ಹೊಸಬರ ತಂಡವನ್ನು ಕಟ್ಟಿಕೊಂಡು ಇನ್ನೊಂದು ಚಿತ್ರಕ್ಕೆ ಚಿತ್ರಕಥೆ ಬರೆಯುತ್ತಿದ್ದಾರೆ. ನಿರ್ಮಾಪಕರೂ ಸಿಕ್ಕಿದ್ದಾರೆ. ಈ ಸಲ ಸ್ವಲ್ಪ ಹೆಚ್ಚು ಬಜೆಟ್ ಇರುವುದರಿಂದ ಇನ್ನಷ್ಟು ವೈವಿಧ್ಯಮಯವಾಗಿ ಮಾಡಬೇಕೆನ್ನುವುದು ಅವರ ಬಯಕೆ. ಕವಿತಾ ಲಂಕೇಶ್ ಜತೆಗೆ 'ಕ್ರೇಜಿ ಲೋಕ'ದಲ್ಲಿ ಸಹಾಯಕ ನಿರ್ದೇಶಕಿಯಾಗಿದ್ದ ನಟಿ ಹರ್ಷಿಕಾ ಪೂಣಚ್ಚ ಅವರಿಗೂ ನಿರ್ದೇಶಕಿ ಆಗುವ ಆಸೆ ಇದೆಯಂತೆ. ಒಟ್ಟಾರೆ ನಿರ್ದೇಶಕಿಯರ ಉತ್ಸಾಹಕ್ಕೆ ಕೊರತೆ ಇಲ್ಲ ಎನ್ನುವುದು ಶುಭ ಸಂಗತಿಯೇ.

ಒಂದು ಘಟನೆಯನ್ನು ಹೇಳಿ ಲೇಖನ ಮುಗಿಸುವುದು ಒಳ್ಳೆಯದು. ಕವಿತಾ ಲಂಕೇಶ್ ಅವರ ಬಳಿ ನಿರ್ಮಾಪಕರೊಬ್ಬರು ಸಿನಿಮಾ ಮಾಡಿಕೊಡಿ ಎಂದು ಬಂದಿದ್ದರು. ಕಥೆಯ ಬಗ್ಗೆ ಮಾತನಾಡಿ ಎಲ್ಲ ಆದ ಮೇಲೆ 'ಫೈನಾನ್ಸ್ ಹೇಗೆ? ನಿಮ್ಮ ಆದಾಯ ಮೂಲ ಯಾವುದು?' ಎಂದು ಕವಿತಾ ವಿಚಾರಿಸಿದ್ದಾರೆ. ಆ ನಿರ್ಮಾಪಕ, 'ಒಂದು ಮನೆ ಇದೆ. ಅದನ್ನು ಮಾರಿ ದುಡ್ಡು ತರುತ್ತೇನೆ' ಎಂದಿದ್ದಾರೆ. ತಕ್ಷಣವೇ ಕವಿತಾ, 'ಅಯ್ಯೊ ಬೇಡ ಕಣ್ರೀ, ಸಿನಿಮಾನೇ ಮುಖ್ಯ ಅಲ್ಲ. ಮನೆ ಮಾರಿ ಸಿನಿಮಾ ಮಾಡುವುದು ಖಂಡಿತಾ ಬೇಡ' ಎಂದು ಆಫರ್ ನಿರಾಕರಿಸಿದರು! ನಮ್ಮಲ್ಲಿ ನಿರ್ದೇಶಕರಿಗೂ, ನಿರ್ದೇಶಕಿಯರಿಗೂ ಹೀಗೂ ಒಂದು ಸಣ್ಣ ವ್ಯತ್ಯಾಸ ಇದೆ ಎನ್ನಬಹುದು!